ಮುಂತಾದವರು ಸಹ ಹೀಗೆ ಸರ್ಕಾರಿ ಮನೆಗಳನ್ನು ಬಾಡಿಗೆಗೆ ಕೊಡುತ್ತಿದ್ದರು. ಬೇಡಿಕೆ ಮತ್ತು ಪೂರೈಕೆಯ ಅರ್ಥಶಾಸ್ತ್ರದ ಸಮೀಕರಣದಂತೆ ಎಲ್ಲವೂ ಶಾಂತವಾಗಿ, ಪರಸ್ಪರ ಸೌಹಾರ್ದತೆಯಿಂದ ಸಾಗುತ್ತಿದ್ದವು.

ನನಗೆ ನನ್ನ ಹೊಸ ಮನೆ ತುಂಬಾ ಇಷ್ಟವಾಗಿತ್ತು. ಇಲ್ಲಿ ನನಗೆ ಮೋಹನನಂಥ ಕೆಟ್ಟ ಮನಸ್ಥಿತಿಯ ವ್ಯಕ್ತಿಯ ಭಯವಿರಲಿಲ್ಲ. ಅಕ್ಕಪಕ್ಕದ ಮನೆಯವರು ಬಹುತೇಕ ಉದ್ಯೋಗಸ್ಥರು ಅಥವಾ ಸರ್ಕಾರಿ ಸಿಬ್ಬಂದಿಗಳಾಗಿದ್ದರು. ಯಾರೊಂದಿಗೂ ಸಲಿಗೆಯನ್ನು ಬೆಳೆಸಿಕೊಳ್ಳಬೇಡವೆಂದು ಅಮ್ಮ ಹೇಳಿದ್ದರು. ಹೊಸ ಮನೆಗೆ ಬಂದ ಎರಡು ತಿಂಗಳ ನಂತರ ಅಮ್ಮ ಮಂಚ ಕೊಂಡರು. ಈ ಮಂಚ ನೂತನ್ ಸೋದರತ್ತೆಯವರ ಮಂಚದಂತೆ ಸುಂದರವಾಗಿರಲಿಲ್ಲ, ಆದರೆ ಅದರ ಮೇಲೆ ಅಮ್ಮ ಮತ್ತು ನಾನು ಜೊತೆಯಲ್ಲಿ ಮಲಗಬಹುದಿತ್ತು. ಹೊಸ ಮನೆಗೆ ಬಂದ ಎರಡು ತಿಂಗಳೊಳಗೆ ಸೆಲಟ್ ಅಂಕಲ್ ನಮ್ಮ ಮನೆಗೆ ಬಂದುಹೋಗುವುದು ಆರಂಭವಾಯಿತು. ಅವರು ಅಮ್ಮನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಅಮ್ಮನ ಅಧಿಕಾರಿಗಳಾಗಿದ್ದರು. ಸೆಲಟ್ ಅಂಕಲ್ ನನಗೆ ಸದಾ ಉಡುಗೊರೆಯೊಂದನ್ನು ತರುತ್ತಿದ್ದರು. ಕಾಮಿಕ್ಸ್, ರಿಬ್ಬನ್, ತಲೆಗೂದಲುಗಳಿಗೆ ಕ್ಲಿಪ್‌ಗಳನ್ನು ತರುತ್ತಿದ್ದರು. ಅವರು ನಗುಮುಖದ ವ್ಯಕ್ತಿಯಾಗಿದ್ದರು. ಅವರು ಬಂದಾಗ ಅಮ್ಮ ಸಹ ಮನಬಿಚ್ಚಿ ನಗುತ್ತಿದ್ದರು. ಸೆಲಟ್ ಅಂಕಲ್ ನನಗೆ ಬೇಗನೆ ಇಷ್ಟವಾದರು. ತಂದೆಯಿಲ್ಲದ ನನ್ನ ಜೀವನದಲ್ಲಿ ಸೆಲಟ್ ಅಂಕಲ್ ತಂದೆಯ ಕೊರತೆಯನ್ನು ನೀಗಿಸಿದ್ದರು.

ಸೆಲಟ್ ಅಂಕಲ್ ಸಂಜೆಗೆ ಅಮ್ಮನನ್ನು ತಮ್ಮ ಬಜಾಜ್ ಸ್ಕೂಟರಿನ ಹಿಂಭಾಗದಲ್ಲಿ ಕೂರಿಸಿಕೊಂಡು ಮನೆಗೆ ಬಿಡುತ್ತಿದ್ದರು. ಅಮ್ಮ ಅವರಿಗೆ ಚಹಾ ಕುಡಿದು ಹೋಗಲು ಹೇಳುತ್ತಿದ್ದರು.

'ಸುಗಂಧಾ, ಅಂಕಲ್‌ಗೆ ಚಹಾ ಕುಡಿದು ಹೋಗಲು ಹೇಳು'. ಸೆಲಟ್ ಅಂಕಲ್ ಅವರಲ್ಲಿ ನಿವೇದನೆ ಮಾಡಿಕೊಳ್ಳುವಂತೆ ಅಮ್ಮ ನನಗೆ ಹೇಳುತ್ತಿದ್ದರು. ಹೀಗೆ ಮಾಡಿದಾಗ ಅಮ್ಮನಿಗೆ ಖುಷಿಯಾಗುತ್ತಿತ್ತು. ಅಂಕಲ್ ಸಹ ಮುಗುಳ್ನಗುತ್ತಾ ಹೇಳುತ್ತಿದ್ದರು, 'ನಮ್ಮ ಮಗಳು ಒತ್ತಾಯಿಸಿದರೆ, ನಾವು ಚಹಾ ಕುಡಿದೇ ಹೋಗಬೇಕಾಗುತ್ತದೆ.' ಅಮ್ಮ ಮತ್ತು ಸೆಲಟ್ ಅಂಕಲ್ ತಮ್ಮ ಪಾರಸ್ಪರಿಕ ಸಂಬಂಧಗಳೊಂದಿಗೆ ನನಗೂ ಸಹ ಸಹಜವಾಗಿರುವಂತೆ ನನಗೆ ಆಗ್ರಹಿಸುವ ಅಭಿನಯವನ್ನು ಮಾಡುತ್ತಿದ್ದರು; ಈ ನಿಜಾಂಶ ನನಗೆ ವಯಸ್ಸಾದಂತೆ ಅರ್ಥವಾಯಿತು.

ಬದುಕಿನ ಬಂಡಿ ಸರಿಯಾದ ಹಳಿಯ ಮೇಲೆ ಸಾಗುತ್ತಿತ್ತು. ಅಮ್ಮ ಟೈಪಿಂಗ್ ಪರೀಕ್ಷೆಯನ್ನು ಪಾಸು ಮಾಡಿಕೊಂಡಿದ್ದರು. ಅವರ ನೌಕರಿಯನ್ನು ಖಾಯಂ ಮಾಡಲಾಗಿತ್ತು. ಈಗ ಅವರಿಗೆ ತುಟ್ಟಿ ಭತ್ಯೆಯ ಜೊತೆಗೆ ಉಳಿದ ಭತ್ಯೆಗಳೂ ಸೇರಿ ಉತ್ತಮ ವೇತನ ಸಿಗುತ್ತಿತ್ತು. ಈಗ ಅಮ್ಮ ಮಗಳ ಕೆಲಸ ಆರಾಮಾಗಿ ನಡೆಯುತ್ತಿತ್ತು. ಅಮ್ಮ ನನಗಾಗಿ ಎರಡು ಸ್ಕರ್ಟ್‌ಬ್ಲೌಸ್, ಒಂದು ಬೆಲ್‌ಬಾಟಮ್



### ಕಳೆದ ಸಂಚಿಕೆಯಲ್ಲಿ

ಮನೆಯಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಸುಗಂಧಾ ಆತಂಕದ ಘಟನೆಯೊಂದಕ್ಕೆ ಸಾಕ್ಷಿಯಾದಳು. ಅದು ಅಪ್ಪ–ಅಮ್ಮನ ಮಧ್ಯೆ ನಡೆದ ಜಗಳ. ಜಗಳ ತಾರಕಕ್ಕೇರಿ ಅಮ್ಮ ನೆಲದ ಮೇಲೆ ಹಾಗೇ ಕೂತಿದ್ದಳು. ಆರ್ಥರೈಟಿಸ್‌ನಿಂದ ಬಳಲುವ ಅಮ್ಮನಿಗೆ ನೆಲದ ಥಂಡಿ ಸಹಿಸಲಸಾಧ್ಯ ಎಂಬುದು ಸುಗಂಧಾ ಗಮನಕ್ಕೆ ಬಂದು ಅಮ್ಮನನ್ನು ಏಳಿಸಿ ಸೋಫಾ ಮೇಲೆ ಕೂರಿಸಿ ಚಹಾ ತಂದುಕೊಟ್ಟಳು. ಅಪ್ಪ ಸಂಶೋಧನಾ ವಿದ್ಯಾರ್ಥಿನಿ ಜೊತೆ ಸಂಬಂಧ ಇರಿಸಿಕೊಂಡದ್ದು ತಾಯಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿ ಸುಗಂಧಾಳನ್ನು ಕೂಡಿಕೊಂಡು ಮನೆಬಿಟ್ಟು ಭೋಪಾಲಕ್ಕೆ ಹೋಗಿ ಸೋದರತ್ತೆ ಮನೆಯಲ್ಲಿ ಉಳಿದುಕೊಳ್ಳುತ್ತಾರೆ. ಆದಾಗಿ ಬಾಡಿಗೆ ಮನೆ ಹಿಡಿದು, ಅಲ್ಲಿಯೇ ಸುಗಂಧಾ ಶಾಲೆಗೆ ಸೇರುತ್ತಾಳೆ. ಬಾಡಿಗೆ ಮನೆಯಲ್ಲೂ ಬದುಕು ಸುಗಮವಾಗಬಹುದು ಎಂದೆಣಿಸುತ್ತಿರುವಾಗಲೇ ಮನೆ ಮಾಲೀಕ ಮೋಹನನ ಕಾಮುಕ ಬುದ್ಧಿಯಿಂದಾಗಿ ತೀವ್ರ ಉಪಟಳವನ್ನು ಸುಗಂಧಾ ಎದುರಿಸಬೇಕಾಯಿತು.

ಟಾಪ್ ಖರೀದಿಸಿ ಕೊಟ್ಟಿದ್ದರು. ಅದು ನನ್ನ ಮೊದಲ ಬೆಲ್‌ಬಾಟಮ್ ಆಗಿದ್ದು, ಆಗ ಬೆಲ್‌ಬಾಟಮ್ ಫ್ಯಾಷನ್ನಿನ ಕೊನೆಯ ಹಂತದಲ್ಲಿತ್ತು. ಸ್ಲೇಟಿ ಬಣ್ಣದ ಬೆಲ್‌ಬಾಟಮ್ ಮತ್ತು ಅದರ ಮೇಲೆ ಕೆಂಪು ಹಳದಿಯ ದೊಡ್ಡದೊಡ್ಡ ಹೂವುಗಳ ಟಾಪ್. ನನಗೆ ತುಂಬಾ ಇಷ್ಟವಾಗಿತ್ತು. ಸೆಲಟ್ ಅಂಕಲ್ ನನಗೊಂದು ಬ್ರೇಸ್ಲೆಟ್ ಕೊಂಡಿದ್ದರು. ಆ ಬ್ರೇಸ್ಲೆಟ್ ಸಹ ನನಗೆ ತುಂಬಾ ಇಷ್ಟವಾಗಿತ್ತು. ಅದನ್ನು ಮೊದಲ ಬಾರಿಗೆ ನನ್ನ ಆತ್ಮೀಯ ಗೆಳತಿ ರೀತಾ ಚೂಡಾಸಾಮಾಳ ಹುಟ್ಟುಹಬ್ಬದಂದು ಧರಿಸಿದ್ದೆ.

ರೀತಾ ಚೂಡಾಸಾಮಾ ಗುಜರಾತಿಯವಳಾಗಿದ್ದಳು. ಅವರ ಮನೆಯ ವಾತಾವರಣ ನನಗೆ ತುಂಬಾ ಇಷ್ಟವಾಗುತ್ತಿತ್ತು. ಅವರ ತಾಯಿ ನಗುಮುಖದ, ಬಿಚ್ಚು ಮನಸ್ಸಿನ ಮಹಿಳೆಯಾಗಿದ್ದರು. ಅವಳ ತಂದೆ ಒಂದು ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸಾಮಾನ್ಯವಾಗಿ ಸಂಜೆಯ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ಅವರನ್ನು ನಾನು ನೋಡಿದ್ದು ಕಡಿಮೆಯೇ. ಏಕೆಂದರೆ ನಾನು ಶಾಲೆಯಿಂದ ಸಂಜೆ ರೀತಾಳ ಮನೆಯಿಂದ ಹಾದು ನಮ್ಮ ಮನೆಗೆ ಹೋದಾಗ, ಅವಳ ತಂದೆ ಕೆಲಸಕ್ಕೆ ಹೋಗಿರುತ್ತಿದ್ದರು. ಅವರು ಸ್ವಲ್ಪ ಬೋಳು ತಲೆಯವರಾಗಿದ್ದು, ಕೃಶಕಾಯದ ಮತ್ತು ಸಾಮಾನ್ಯ ನಿಲುವಿನ ವ್ಯಕ್ತಿಗಳಾಗಿದ್ದರು. ಅವರು ರೀತಾಳ ತಾಯಿಯಂತೆ ನಗುಮುಖದವರಾಗಿರಲಿಲ್ಲ. ಅವರು ನಗು ಮುಖವನ್ನು ನಾನೆಂದೂ ನೋಡಿರಲಿಲ್ಲ. ಅವರು ಸೈಕಲ್‌ನಿಂದ ಫ್ಯಾಕ್ಟ್ರಿಗೆ ಹೋಗುತ್ತಿದ್ದರು, ಆದಾಗ್ಯೂ ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿತ್ತು. ಆ ದಿನಗಳಲ್ಲಿ ಮಧ್ಯಮ ವರ್ಗದ ವ್ಯಕ್ತಿ ಸಾಮಾನ್ಯವಾಗಿ ಸ್ಕೂಟರ್ ಅಥವಾ ಮೊಪೆಡ್ ವಾಹನವನ್ನು ಉಪಯೋಗಿಸುತ್ತಿದ್ದರು, ನಾಲ್ಕು ಚಕ್ರಗಳ ವಾಹನಗಳನ್ನು ಉಪಯೋಗಿಸುತ್ತಿರಲಿಲ್ಲ.

ರೀತಾ ನನ್ನ ಜೀವನದಲ್ಲಿ ಬೇರೊಂದು ರೀತಿಯ ಪ್ರಭಾವವನ್ನು ಬೀರಿದಳು. ನಿಜ ಹೇಳಬೇಕೆಂದರೆ, ಲೈಂಗಿಕ ಕ್ರಿಯೆಗಳಿಗೆ ಸಂಬಂಧಿಸಿದ ತಿಳಿವಳಿಕೆಗಳನ್ನು ಮೊದಲು ಹೇಳಿದ್ದು ಅವಳೇ. ರೀತಾ ವಯಸ್ಸಿನಲ್ಲಿ ನನಗಿಂತ ಸುಮಾರು ಏಳು ವರ್ಷ ದೊಡ್ಡವಳಾಗಿದ್ದಳು. ಗಿಡ್ಡ ನಿಲುವನ್ನು ಹೊಂದಿದ್ದ ಅವಳು ನನಗೆ ಸರಿಸಮನಾಗಿಯೇ ಕಾಣ ಬರುತ್ತಿದ್ದಳು. ಅವಳ ಶಾಲಾಶಿಕ್ಷಣ ತಡವಾಗಿ ಆರಂಭವಾಗಿದ್ದು, ಆರಂಭದ ತರಗತಿಯಲ್ಲಿ ಎರಡು ಬಾರಿ ಅನುತ್ತೀರ್ಣಳಾಗಿದ್ದಳು. ಆದರೆ ಅವಳು ಕ್ರೀಡೆಯಲ್ಲಿ ಮುಂದಿದ್ದಳು. ಅವಳು ಟೇಬಲ್ ಟೆನ್ನಿಸ್ ಕ್ರೀಡೆಯಲ್ಲಿ ನಿಪುಣೆಯಾಗಿದ್ದಳು. ಅವಳೇ ನನಗೆ ಟೇಬಲ್ ಟೆನಿಸ್ ಆಟವನ್ನು ಕಲಿಸಿದ್ದಳು.

ರೀತಾ ಮಾನಸಿಕವಾಗಿಯೂ ನನಗಿಂತ ದೊಡ್ಡವಳಾಗಿದ್ದಳು. ಅವಳಿಗೆ ಆ ವಯಸ್ಸಿನಲ್ಲಿ ಲೈಂಗಿಕತೆಯ ಬಗ್ಗೆ ಅರಿವು ಮೂಡಿತ್ತು. ಆದರೆ ನಾನು ಈ ಬಗ್ಗೆ ಶೂನ್ಯಳಾಗಿದ್ದೆ. ನಾವಿಬ್ಬರು ಮೊದಲ ವರ್ಷದ ಬಿ.ಎ. ಪದವಿಯನ್ನು ಜೊತೆಯಲ್ಲಿಯೇ ಓದಿದೆವು. ಮೊದಲು ಒಂದೇ ಶಾಲೆಯಲ್ಲಿ, ನಂತರ ಒಂದೇ ವಿಶ್ವವಿದ್ಯಾಲಯದಲ್ಲಿ ಓದಿದೆವು. ಪ್ರಥಮ ವರ್ಷದ ಬಿ.ಎ.ಗೆ ದಾಖಲಾದ ಎರಡು ತಿಂಗಳಿನಲ್ಲಿಯೇ ರೀತಾಳ ವಿವಾಹವನ್ನು ನಿಶ್ಚಯಿಸಲಾಗಿತ್ತು. ರೀತಾ ತನ್ನ ವಿವಾಹದ ಬಗ್ಗೆ ತುಂಬಾ ಉತ್ಸಾಹದಲ್ಲಿರುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಆ ದಿನಗಳಲ್ಲಿ ಅವಳು ನಮ್ಮ ಹಿಸ್ಟ್ರಿ ಪ್ರೊಫೆಸರ್ ಬಗ್ಗೆ ಸಹ ಆಕರ್ಷಣೆಗೆ ಒಳಗಾಗಿದ್ದಳು. ಅವಳು ಅವರನ್ನು ತನ್ನೆಡೆಗೆ ಸೆಳೆಯಲು ತುಂಬಾ ಪ್ರಯತ್ನಿಸಿದ್ದಳು. ಆದರೆ ಅವರು ರೀತಾಳ ಬದಲಿಗೆ ನನ್ನ ಬಗ್ಗೆ ಗಮನ ಕೊಡುತ್ತಿದ್ದರು, ಏಕೆಂದರೆ ನಾನು ಅಧ್ಯಯನದಲ್ಲಿ ಮುಂದಿದ್ದೆ, ಅವರಿಗೆ ಬುದ್ಧಿವಂತ ವಿದ್ಯಾರ್ಥಿಗಳ ಬಗ್ಗೆ ಆಸಕ್ತಿಯಿತ್ತು, 'ಫ್ಲರ್ಟ್' ಮಾಡುವವರ ಬಗ್ಗೆ ಇರಲಿಲ್ಲ.

ರೀತಾಳ ವಿವಾಹ ನಿಶ್ಚಿತವಾದಾಗ ಅವಳು ತುಂಬಾ ಖುಷಿಗೊಂಡಳು.

'ನೀನು ವಿದ್ಯಾಭ್ಯಾಸವನ್ನು ನಿಲ್ಲಿಸ್ತೀಯಾ?' ನಾನು ಅವಳನ್ನು ಕೇಳಿದ್ದೆ.

(ಸಶೇಷ)